

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18-11-2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಜೀವನಚರಿತ್ರೆಯ ಘಟನೆಗಳನ್ನು ಪ್ರಸ್ತಾಪಿಸಲಾಗುತ್ತಿತ್ತು. ಹಝ್ರತ್ ಪೈಗಂಬರ್(ಸ)ರ ದೃಷ್ಟಿಯಲ್ಲಿ ಹಝ್ರತ್ ಅಬೂಬಕರ್(ರ)ರ ಸ್ಥಾನಮಾನದ ಬಗ್ಗೆ ಹಿಂದೆಯೂ ಪ್ರಸ್ತಾಪಿಸಿದ್ದೆ. ಹಝ್ರತ್ ಅಬೂಬಕರ್(ರ)ರನ್ನು ಹಝ್ರತ್ ಪೈಗಂಬರ್(ಸ) ತನ್ನ ಉತ್ತರಾಧಿಕಾರಿಯಾಗಿ ನೇಮಿಸಲು ಬಯಸುತ್ತಿದ್ದರು ಎಂದು ಇದರಿಂದ ಗೊತ್ತಾಗುತ್ತದೆ. ಮಾತ್ರವಲ್ಲ, ಅಲ್ಲಾಹನು ಹಝ್ರತ್ ಅಬೂಬಕರ್(ರ)ರನ್ನೇ ತನ್ನ ನಂತರ ಖಲೀಫ ಮತ್ತು ಉತ್ತರಾಧಿಕಾರಿಯನ್ನಾಗಿ ಮಾಡುವನು ಎಂಬ ಸೂಚನೆಯನ್ನು ಅವರು ನೀಡಿದ್ದರು. ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ರೋಗಾವಸ್ಥೆಯಲ್ಲಿದ್ದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಿನ್ನ ತಂದೆಯಾದ ಅಬೂಬಕರ್‌ರನ್ನು ನನ್ನ ಬಳಿಗೆ ಕರೆದುಕೊಂಡು ಬಾ, ತಾನು ಉತ್ತರಾಧಿಕಾರಿಯಾಗಲು ಹೆಚ್ಚು ಅರ್ಹನು ಎಂದು ಬೇರೆ ಯಾರಾದರೂ ಹೇಳದಿರಲಿಕ್ಕಾಗಿ ನಾನೊಂದು ಲಿಖಿತವನ್ನು ಬರೆಯುವೆನು. ಹೇಗಿದ್ದರೂ ಅಲ್ಲಾಹನು ಮತ್ತು ಸತ್ಯವಿಶ್ವಾಸಿಗಳು ಅಬೂಬಕರ್(ರ)ರನ್ನಲ್ಲದೇ ಬೇರೆ ಯಾರನ್ನೂ ಅಂಗೀಕರಿಸಲಾರರು.

(ಹಝ್ರತ್ ಆಯಿಶ(ರ)ರ ವಿರುದ್ಧ ಮಾಡಲಾದ ಮಹಾ ಸುಳ್ಳಾರೋಪದ ಘಟನೆಯ ಬಗ್ಗೆ ಪ್ರಸ್ತಾಪಿಸುತ್ತಾ ಹುಝೂರ್ ಹೀಗೆ ಹೇಳಿದರು:) ಪರ್ವತ ಸೀಳಿಹೋಗುವಂತಹ ಆರೋಪವನ್ನು ಹಝ್ರತ್ ಆಯಿಶ(ರ)ರ ವಿರುದ್ಧ ಹೊರಿಸಲಾಗಿತ್ತು. ಆದರೆ ಅವರ ಹೆತ್ತವರಿಗೆ ತಮ್ಮ ಮಗಳೊಡನೆ ಇರುವ ಪ್ರೀತಿಗಿಂತ ಹಝ್ರತ್ ಪೈಗಂಬರ್(ಸ)ರೊಡನೆ ಪ್ರೀತಿ ಮತ್ತು ಗೌರವವು ಬಹಳ ಹೆಚ್ಚಿಗೆ ಇತ್ತು. ಹಝ್ರತ್ ಪೈಗಂಬರ್(ಸ) ಇರಿಸಲು ಬಯಸಿದ್ದ ಅದೇ ಸ್ಥಿತಿಯಲ್ಲಿ ತಮ್ಮ ಮಗಳನ್ನು ಅವರು ಇರಿಸಿಕೊಂಡಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಕುರಿತು ಹೇಳುತ್ತಾರೆ: ಯಾರಿಗೆಲ್ಲ ಕೆಟ್ಟ ಹೆಸರನ್ನು ತರುವುದರಿಂದ ಕಪಟವಿಶ್ವಾಸಿಗಳಿಗೆ ಮತ್ತು ಅವರ ಸರದಾರರಿಗೆ ಪ್ರಯೋಜನವಿತ್ತು ಎಂಬುವುದನ್ನು ನಾವು ಯೋಚಿಸಬೇಕಾಗಿದೆ. ಹಝ್ರತ್ ಆಯಿಶ(ರ)ರ ಮೇಲೆ ಆರೋಪ ಹೊರಿಸಿಕೊಂಡು ಕಪಟವಿಶ್ವಾಸಿಗಳಿಗೆ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)ರೊಡನೆ ಇದ್ದ ಹಗೆಯನ್ನು ತೀರಿಸಬಹುದಾಗಿತ್ತು. ಏಕೆಂದರೆ ಹಝ್ರತ್ ಆಯಿಶ(ರ) ಒಬ್ಬರ ಪತ್ನಿಯೂ ಮತ್ತೊಬ್ಬರ ಪುತ್ರಿಯೂ ಆಗಿದ್ದರು. ಈ ಇಬ್ಬರಿಗೆ ಕೆಟ್ಟ ಹೆಸರನ್ನು ತಂದರೆ, ಕೆಲವು ಜನರಿಗೆ ರಾಜಕೀಯವಾಗಿ ಮತ್ತು ನೈತಿಕವಾಗಿ ಪ್ರಯೋಜನ ಲಭಿಸಬಹುದಾಗಿತ್ತು. ಅಲ್ಲದೆ ಹಝ್ರತ್ ಆಯಿಶ(ರ)ರಿಗೆ ಕೆಟ್ಟ ಹೆಸರನ್ನು ತರುವುದರಿಂದ ಯಾರಿಗೂ ಪ್ರಯೋಜನ ಲಭಿಸಲು ಸಾಧ್ಯವಿರಲಿಲ್ಲ. ಹಝ್ರತ್ ಆಯಿಶ(ರ)ರ ಸ್ಥಾನವನ್ನು ಹಝ್ರತ್ ಪೈಗಂಬರ್(ಸ)ರ ದೃಷ್ಟಿಯಲ್ಲಿ ಕೆಳಗೆ ಇಳಿಸಲು ಮತ್ತು ತಮಗೆ ಸ್ಥಾನ ಲಭಿಸುವಂತಾಗಲು ಇತರ ಪತ್ನಿಯಂದಿರು ಈ ಆರೋಪದಲ್ಲಿ ಭಾಗಿಯಾಗಿರಬಹುದು ಎಂದು ಭಾವಿಸಬಹುದಾಗಿತ್ತು. ಆದರೆ ಹಾಗೇನೂ ನಡೆದಿರಲಿಲ್ಲ ಎಂದು ಚರಿತ್ರೆಯಿಂದ ತಿಳಿದುಬರುತ್ತದೆ. ಪತ್ನಿಯೊಬ್ಬಳೊಡನೆ ಹಝ್ರತ್ ಪೈಗಂಬರ್(ಸ) ಈ ಕುರಿತು ಕೇಳಿದಾಗ, ಆ ಪತ್ನಿ ಹೀಗೆ ಹೇಳಿದರು: ಆಯಿಶರಲ್ಲಿ ನಾನು ಒಳಿತನ್ನಲ್ಲದೇ ಬೇರೇನೂ ಕಂಡಿಲ್ಲ.

ಹಝ್ರತ್ ಪೈಗಂಬರ್(ಸ)ರ ನಂತರ ಯಾರಿಗಾದರೂ ಸ್ಥಾನವಿದ್ದರೆ, ಅದು ಅಬೂಬಕರ್(ರ)ರಿಗೆ ಆಗಿದೆ ಎಂದು ಸಹಾಬಿಯರು ಹೇಳುತ್ತಿದ್ದರು ಎಂದು ಹದೀಸ್‌ಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಹಝ್ರತ್ ಪೈಗಂಬರ್(ಸ) ನಿಧನಗೊಂಡರೆ ಮದೀನದ ಅರಸನಾಗಬೇಕು ಎಂದು ಬಯಸುತ್ತಿದ್ದ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್ ಎಂಬವನು ಹಝ್ರತ್ ಪೈಗಂಬರ್(ಸ)ರ ನಂತರ ತನಗೆ ಅಧಿಕಾರ ಲಭಿಸುವ ಸಾಧ್ಯತೆ ಕಡಿಮೆಯಾಗುವುದನ್ನು ಕಂಡಾಗ ತನ್ನ ಉದ್ದೇಶವನ್ನು ಈಡೇರಿಸಲಿಕ್ಕಾಗಿ ಹಝ್ರತ್ ಆಯಿಶ(ರ)ರ ಮೇಲೆ ಆರೋಪ ಹೊರಿಸಿದನು. ಹೀಗೆ ಹಝ್ರತ್ ಪೈಗಂಬರ್(ಸ)ರಿಗೆ ಹಝ್ರತ್ ಆಯಿಶ(ರ)ರೊಡನೆ ದ್ವೇಷ ಉಂಟಾಗಲು ಹಾಗೂ ಹಝ್ರತ್ ಪೈಗಂಬರ್(ಸ)ರ ಮತ್ತು ಮುಸ್ಲಿಮರ ದೃಷ್ಟಿಯಲ್ಲಿ ಹಝ್ರತ್ ಅಬೂಬಕರ್(ರ)ರಿಗೆ ಇದ್ದ ಗೌರವ ಕಡಿಮೆಯಾಗಲು ಮತ್ತು ಹಝ್ರತ್ ಅಬೂಬಕರ್(ರ) ಮುಂದಿನ ಖಲೀಫರಾಗುವ ಸಾಧ್ಯತೆ ಇರದಂತೆ ಆಗಲು ಅವನು ಹೀಗೆ ಮಾಡಿದನು. ಇದೇ ವಿಷಯವನ್ನು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಪ್ರಸ್ತಾಪಿಸಿರುವನು: **ಇನ್ನಲ್ಲಧೀನ ಜಾಊ ಬಿಲ್ ಇಫ್‌ಕಿ ಉಸ್‌ಬತುಮ್ಮಿನ್‌ಕುಮ್. ಲಾ ತಹ್‌ಸಬೂಹು ಶರ್‍ರಲ್ಲಕುಂ. ಬಲ್ ಹುವ ಖೈರುಲ್ಲಕುಂ**. ಅರ್ಥ: ನಿಶ್ಚಯವಾಗಿಯೂ ಆ ಮಹಾ ಸುಳ್ಳನ್ನು ಆರೋಪಿಸಿದವರು ನಿಮ್ಮ ಪೈಕಿಯ ಒಂದು ಗುಂಪಿನವರೇ ಆಗಿದ್ದಾರೆ. ಅದು ನಿಮಗೆ ದೋಷಕರವೆಂದು ಭಾವಿಸಬೇಡಿರಿ. ಬದಲು, ನಿಮಗೆ ಅದು ಗುಣಕರವಾಗಿದೆ. ಎಂದರೆ ಈ ಆರೋಪ ನಿಮ್ಮ ಒಳಿತು ಮತ್ತು ಪ್ರಗತಿಗೆ ಕಾರಣವಾಗುವುದು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸೂರಃ ನೂರ್‌ನ ಆರಂಭದಿಂದ ಕೊನೆಯ ತನಕ ಒಂದೇ ವಿಷಯವನ್ನು ಹೇಗೆ ವಿವರಿಸಲಾಗಿದೆ ಎಂದು ನೋಡಿರಿ. ಹಝ್ರತ್ ಆಯಿಶ(ರ)ರ ಮೇಲೆ ಹೊರಿಸಲಾದ ಆರೋಪದ ಪ್ರಸ್ತಾಪದ ನಂತರ ಕೂಡಲೇ ಖಿಲಾಫತಿನ ಬಗ್ಗೆ ಅಲ್ಲಾಹನು ಪ್ರಸ್ತಾಪಿಸಿರುವನು. ಖಿಲಾಫತ್ ಎಂಬುದು ಅರಸುತನವಲ್ಲ, ಅದು ದೈವಿಕ ಪ್ರಕಾಶವನ್ನು ನೆಲೆನಿಲ್ಲಿಸಲು ಇರುವ ಒಂದು ಮಾರ್ಗವಾಗಿದೆ ಎಂದು ಹೇಳಿರುವನು. ಆದ್ದರಿಂದ ಅದರ ಸ್ಥಾಪನೆಯ ಹೊಣೆಗಾರಿಕೆಯನ್ನು ಅಲ್ಲಾಹನು ತನ್ನ ಕೈಯಲ್ಲೇ

ಇರಿಸಿರುವನು. ಅದು ನಷ್ಟವಾಗುವುದರಿಂದ ನುಬುವ್ವತಿನ ಪ್ರಕಾಶ ಮತ್ತು ದೈವಿಕ ಪ್ರಕಾಶ ನಷ್ಟವಾಗುವುದು. ಆದ್ದರಿಂದ ಅಲ್ಲಾಹನು ಆ ಪ್ರಕಾಶವನ್ನು ಖಂಡಿತ ಸ್ಥಾಪಿಸುವನು ಮತ್ತು ನುಬುವ್ವತ್ತಿನ ನಂತರ ಅರಸುತನ ಸ್ಥಾಪನೆಯಾಗಲು ಬಿಡಲಾರನು. ಅವನು ಇಚ್ಛಿಸುವವರನ್ನು ಖಲೀಫರನ್ನಾಗಿ ಮಾಡುವನು. ಮಾತ್ರವಲ್ಲ, ಮುಸ್ಲಿಮರಿಂದ ಕೇವಲ ಒಬ್ಬರನ್ನಲ್ಲ, ಅನೇಕರನ್ನು ಖಿಲಾಫತ್ ಸ್ಥಾನದಲ್ಲಿ ಇರಿಸಿಕೊಂಡು ಈ ಪ್ರಕಾಶದ ಕಾಲಾವಧಿಯನ್ನು ಅವನು ದೀರ್ಘಗೊಳಿಸುವನು. ನುಬುವ್ವತಿನ ನಂತರ ತಕ್ಷಣವೇ ಖಿಲಾಫತಿನ ಪರಂಪರೆಯು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಯ ಪ್ರಕಾರ ಜಾರಿಯಲ್ಲಿರಬೇಕಿತ್ತು ಮತ್ತು ಜಾರಿಯಲ್ಲಿತ್ತು ಹಾಗೂ ಅಲ್ಲಾಹನ ವಾಗ್ದಾನದ ಪ್ರಕಾರ ಹಝ್ರತ್ ಮಸೀಹ್ ಮೌಊದ್(ಅ)ರ ಮೂಲಕ ಆ ವ್ಯವಸ್ಥೆ ಪುನಃ ಸ್ಥಾಪನೆಯಾಯಿತು ಎಂಬುದನ್ನು ಅಲ್ಲಾಹನು ತನ್ನ ಕೃತ್ಯರೂಪದ ಸಾಕ್ಷ್ಯದ ಮೂಲಕ ಸಾಬೀತುಗೊಳಿಸಿದನು.

ಹಝ್ರತ್ ಅಬೂಬಕರ್(ರ)ರ ವಿನಯ ಮತ್ತು ನಮ್ರತೆಯ ಬಗ್ಗೆ ಹಝ್ರತ್ ಸಈದ್ ಬಿನ್ ಮುಸಯ್ಯಬ್(ರ) ವರದಿ ಮಾಡುತ್ತಾರೆ: ಒಂದು ಬಾರಿ ಹಝ್ರತ್ ಪೈಗಂಬರ್(ಸ) ತನ್ನ ಕೆಲವು ಸಹಾಬಿಯರ ಜೊತೆಗೆ ಒಂದು ಸಭೆಯಲ್ಲಿ ಕುಳಿತುಕೊಂಡಿದ್ದರು. ಒಬ್ಬ ವ್ಯಕ್ತಿ ಹಝ್ರತ್ ಅಬೂಬಕರ್(ರ)ರೊಡನೆ ಜಗಳ ಮಾಡಿದನು ಮತ್ತು ಅವರಿಗೆ ಮೂರು ಸಲ ತೊಂದರೆ ಕೊಟ್ಟನು. ಆದರೆ ಅವರು ಸುಮ್ಮನಿದ್ದರು. ಮೂರನೇ ಬಾರಿಯ ನಂತರ ಅವರು ಅದಕ್ಕೆ ಪ್ರತಿಕ್ರಿಯಿಸಿದರು. ಆಗ ಹಝ್ರತ್ ಪೈಗಂಬರ್(ಸ) ಅಲ್ಲಿಂದ ಎದ್ದು ನಿಂತರು. ಇದರ ಬಗ್ಗೆ ಹಝ್ರತ್ ಅಬೂಬಕರ್(ರ) ಕೇಳಿದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮ ಕುರಿತು ಆ ವ್ಯಕ್ತಿ ಹೇಳುತ್ತಿದ್ದ ಮಾತನ್ನು ಆಕಾಶದಿಂದ ಇಳಿದು ಬಂದ ಒಂದು ಮಲಕ್ ನಿರಾಕರಿಸುತ್ತಿತ್ತು. ಆದರೆ ನೀವು ಪ್ರತಿಕ್ರಿಯಿಸಲು ತೊಡಗಿದಾಗ ಶೈತಾನನು ಬಂದನು. ಶೈತಾನನು ಬಂದ ಸಭೆಯಲ್ಲಿ ನಾನು ಕುಳಿತುಕೊಳ್ಳುವುದಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂಬಕರ್, ಮೂರು ಸಂಗತಿಗಳಿವೆ. ಅವೆಲ್ಲವೂ ಸತ್ಯ ಸಂಗತಿಗಳಾಗಿವೆ. ಒಂದು, ಯಾವನ ಮೇಲಾದರೂ ದೌರ್ಜನ್ಯ ಮಾಡಲಾಗುವಾಗ, ಅವನು ಆದರಣೀಯನಾದ ಅಲ್ಲಾಹನ ಸಲುವಾಗಿ ಅದನ್ನು ಕಡೆಗಣಿಸಿದರೆ, ಅಲ್ಲಾಹನು ತನ್ನ ಸಹಾಯದಿಂದ ಅವನನ್ನು ಆದರಣೀಯಗೊಳಿಸುವನು. ಎರಡು, ಒಬ್ಬನು ತನ್ನ ಸಂಪತ್ತಿನಿಂದ ದಾನವನ್ನು ಮಾಡಿಕೊಂಡು, ರಕ್ತಸಂಬಂಧವನ್ನು ಸುದೃಢಗೊಳಿಸಿದರೆ, ಅಲ್ಲಾಹನು ಅದರ ಕಾರಣದಿಂದ ಅವನ ಸಂಪತ್ತನ್ನು ವರ್ಧಿಸುವನು. ಮೂರು, ಒಬ್ಬ ವ್ಯಕ್ತಿ ಸಂಪತ್ತನ್ನು ವರ್ಧಿಸುವ ಸಲುವಾಗಿ ಭಿಕ್ಷೆ ಬೇಡುವನಾದರೆ, ಅಲ್ಲಾಹನು ಅವನ ಸಂಪತ್ತನ್ನು ಕಡಿಮೆಗೊಳಿಸುವನು.

ಹಝ್ರತ್ ಅಬೂಬಕರ್(ರ)ರ ಗುಣವೈಶಿಷ್ಟ್ಯಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಪರಿಪೂರ್ಣವಾದ ಜ್ಞಾನವನ್ನು ಹೊಂದಿದ್ದ, ಅಲ್ಲಾಹನ ಬಗ್ಗೆ ಪರಿಜ್ಞಾನವಿದ್ದ, ಬಹಳ ತಾಳ್ಮೆಯಿದ್ದ ಮತ್ತು ಅತ್ಯಂತ ದಯಾಳು ಸ್ವಭಾವವನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ವಿನಯ ಮತ್ತು ನಮ್ರತೆಯಿಂದ ಜೀವನವನ್ನು ಸಾಗಿಸುತ್ತಿದ್ದರು. ಬಹಳವಾಗಿ ಕ್ಷಮಿಸುವವರೂ ಇತರರ ತಪ್ಪುಗಳನ್ನು ಕಡೆಗಣಿಸುವವರೂ ಹಾಗೂ ವಾತ್ಸಲ್ಯ ಮತ್ತು ಕೃಪೆಯ ಸ್ವರೂಪವೂ ಆಗಿದ್ದರು. ಅವರು ತನ್ನ ಹಣೆಯ ಪ್ರಕಾಶದಿಂದ ವಿಶಿಷ್ಟಗೊಂಡಿದ್ದರು (ಗುರುತಿಸಲ್ಪಡುತ್ತಿದ್ದರು). ಅವರ ಆತ್ಮವು ಸೃಷ್ಟಿಗಳಲ್ಲಿ ಶ್ರೇಷ್ಠರಾದ ಹಝ್ರತ್ ಪೈಗಂಬರ್(ಸ)ರ ಆತ್ಮದೊಂದಿಗೆ ಸೇರಿಕೊಂಡಿತ್ತು. ಅವರು ಪವಿತ್ರ ಖುರ್‌ಆನಿನ ಜ್ಞಾನ ಹೊಂದಿದವರೂ ಪ್ರವಾದಿಗಳ ನೇತಾರ ಹಾಗೂ ಮನುಕುಲದ ಹೆಮ್ಮೆಯೂ ಆದ ಹಝ್ರತ್ ಪೈಗಂಬರ್(ಸ)ರನ್ನು ಪ್ರೀತಿಸುವುದರಲ್ಲಿ ಎಲ್ಲರಿಗಿಂತ ಮಿಗಿಲಾದವರೂ ಆಗಿದ್ದರು. ಅವರು ಸತ್ಯವಂತನೂ ಏಕನೂ ಆದ ದೇವನ ಬಣ್ಣವನ್ನು ತನ್ನದಾಗಿಸಿದ್ದರು. ಸತ್ಯಸಂಧತೆ ಎಂಬುದು ಅವರೊಳಗೆ ಹುದುಗಿದ್ದ ಮತ್ತು ಸಹಜವಾಗಿದ್ದ ವೈಶಿಷ್ಟ್ಯವಾಗಿತ್ತು. ಈ ಸತ್ಯಸಂಧತೆಯ ಪ್ರಭಾವ ಮತ್ತು ಪ್ರಕಾಶವು ಅವರ ಪ್ರತಿಯೊಂದು ಮಾತು ಮತ್ತು ಕೃತ್ಯದಲ್ಲಿ ಪ್ರಕಟವಾಗಿತ್ತು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ)ರ ವಿಶೇಷತೆಗಳನ್ನು ಮತ್ತು ಸ್ಥಾನಮಾನಗಳನ್ನು ಆದರಣೀಯನಾದ ಅಲ್ಲಾಹನು ನನಗೆ ತಿಳಿಸಿರುವನು. ಹಝ್ರತ್ ಅಬೂಬಕರ್(ರ)ರ ಜೀವನವೇ ಪ್ರಭುಗಳ ಪ್ರಭುವಾದ ಅಲ್ಲಾಹನ ಮೇಲೆ ಭರವಸೆ ಇರಿಸುವುದು ಮತ್ತು ಸಾಧನ ಸಾಮಗ್ರಿಗಳ ಕಡೆಗೆ ಕಡಿಮೆ ಗಮನ ಹರಿಸುವುದಾಗಿತ್ತು. ಅವರು ತನ್ನ ಶಿಷ್ಟಾಚಾರಗಳಲ್ಲಿ ನಮ್ಮ ಪ್ರವಾದಿ ಮತ್ತು ನೇತಾರರಾದ ಹಝ್ರತ್ ಪೈಗಂಬರ್(ಸ)ರ ನೆರಳಿನಂತೆ ಆಗಿದ್ದರು. ಸೃಷ್ಟಿಗಳಲ್ಲಿ ಶ್ರೇಷ್ಠರಾದ ಪೈಗಂಬರ್(ಸ)ರೊಂದಿಗೆ ಅವರಿಗೆ ಅನಂತವಾದ ಸಂಬಂಧವಿತ್ತು. ಇದೇ ಕಾರಣದಿಂದ ದೀರ್ಘಕಾಲಾವಧಿಯಲ್ಲಿಯೂ ದೂರದ ಭೂಖಂಡಗಳಲ್ಲಿ ಇರುವವರಿಗೂ ಲಭಿಸದ್ದು ಹಝ್ರತ್ ಅಬೂಬಕರ್(ರ)ರಿಗೆ ಹಝ್ರತ್ ಪೈಗಂಬರ್(ಸ)ರ ಅನುಗ್ರಹದಿಂದ ಕ್ಷಣ ಮಾತ್ರದಲ್ಲಿ ಲಭಿಸಿತ್ತು.

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಅಲಿ ಬಿನ್ ಅಬೂತಾಲಿಬ್(ರ) ವರದಿ ಮಾಡುತ್ತಾರೆ: ಪ್ರತಿ ಪ್ರವಾದಿಗೆ ಕುಲೀನರಾದ ಏಳು ಸ್ನೇಹಿತರನ್ನು ನೀಡಲಾಗಿತ್ತು. ನನಗೆ ಹದಿನಾಲ್ಕು ಕುಲೀನ ಸ್ನೇಹಿತರನ್ನು ನೀಡಲಾಗಿದೆ. ಹಝ್ರತ್ ಅಬೂಬಕರ್(ರ) ಕೂಡ ಅವರಲ್ಲಿ ಒಬ್ಬರಾಗಿರುವರು.

ಮುಶ್ರಿಕರು ಇತರರ ಜೊತೆಗೆ ಸೇರಿಕೊಂಡು ಹಜ್ಜ್ ಮಾಡುತ್ತಾರೆ ಮತ್ತು ಶಿರ್ಕಿನ ಪದಗಳನ್ನು ನುಡಿಯುತ್ತಾರೆ ಹಾಗೂ ನಗ್ನರಾಗಿ ಕಅ್‌ಬ ಭವನದ ಪ್ರದಕ್ಷಿಣೆ ಮಾಡುತ್ತಾರೆ ಎಂಬ ಸುದ್ದಿ ತಬೂಕಿನಿಂದ ಮರಳುವಾಗ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತು. ಆ ವರ್ಷ ಹಜ್ಜ್ ಕರ್ಮಾನುಷ್ಠಾನವನ್ನು ಮಾಡುವ ಇರಾದೆಯನ್ನು ಪೈಗಂಬರ್(ಸ) ತ್ಯಜಿಸಿದರು. ಹಿಜರೀ 9ರಲ್ಲಿ ಹಝ್ರತ್ ಅಬೂಬಕರ್(ರ)ರನ್ನು ಹಝ್ರತ್ ಪೈಗಂಬರ್(ಸ) ಹಜ್ಜಿನ ಅಮೀರನ್ನಾಗಿ ಮಾಡಿಕೊಂಡು ಮಕ್ಕಾಗೆ ಕಳುಹಿಸಿದ್ದರು. 300 ಸಂಗಡಿಗರ ಜೊತೆಗೆ ಹಝ್ರತ್ ಅಬೂಬಕರ್(ರ) ಮಕ್ಕಾಗೆ

ಹೊರಟರು. ಖುರ್ಬಾನಿಯ 20 ಜಾನುವಾರುಗಳನ್ನು ಸಹ ಅವರ ಜೊತೆಗೆ ಹಝ್ರತ್ ಪೈಗಂಬರ್(ಸ) ಕಳುಹಿಸಿದರು. ಅವುಗಳ ಕುತ್ತಿಗೆಗಳಲ್ಲಿ ಹಝ್ರತ್ ಪೈಗಂಬರ್(ಸ) ಸ್ವತಃ ತನ್ನ ಕೈಯಿಂದ ಕುರ್ಬಾನಿಯ ಗುರುತಾಗಿ ಕೊರಳಪಟ್ಟಿಗಳನ್ನು ಕಟ್ಟಿದರು ಮತ್ತು ಗುರುತು ಹಾಕಿದರು. ಹಝ್ರತ್ ಅಬೂಬಕರ್(ರ) ಸ್ವತಃ ತನ್ನ ಜೊತೆಗೆ ಕುರ್ಬಾನಿಯ 5 ಜಾನುವಾರುಗಳನ್ನು ತೆಗೆದುಕೊಂಡು ಹೋಗಿದ್ದರು. ಸೂರಃ ತೌಬದ ಆರಂಭಿಕ ವಚನಗಳನ್ನು ಆ ಹಜ್ಜಿನ ಸಂದರ್ಭದಲ್ಲಿ ಹಝ್ರತ್ ಅಲಿ(ರ) ಓದಿ ಹೇಳಿದ್ದರು ಎಂದು ವರದಿಯಲ್ಲಿ ಬಂದಿದೆ. ಅದರ ವಿವರಣೆಯನ್ನು ಹಝ್ರತ್ ಅಲಿ(ರ)ರ ಪ್ರಸ್ತಾಪದಲ್ಲಿ ಹೇಳಲಾಗಿತ್ತು.

ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ಮುಂದುವರೆಯುವುದು.

(ಖುತ್ಬದ ಕೊನೆಯಲ್ಲಿ ಹುಝೂರ್ ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ನಿರ್ವಹಿಸುವುದಾಗಿ ಹೇಳಿದರು. ಜಮಾಅತಿನ ಮುಬಲ್ಲಿಗ್‌ರಾದ ಸನ್ಮಾನ್ಯ ಮುಹಮ್ಮದ್ ದಾವೂದ್ ಝುಫರ್ ಸಾಹಿಬ್‌ರದ್ದು ಜನಾಝ ಹಾಝಿರ್ ಆಗಿತ್ತು. ಮೌಲಾನ ಕರಂ ಇಲಾಹಿ ಝುಫರ್ ಸಾಹಿಬ್‌ರ ಪತ್ನಿಯಾದ ರುಖಿಯ ಶಮೀಂ ಬೇಗಂ ಸಾಹಿಬ ಮತ್ತು ಸಾಹಿಬ್‌ಝಾದ ಮಿರ್ಝಾ ಹನೀಫ್ ಅಹ್ಮದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ತಾಹಿರ ಹನೀಫ್ ಸಾಹಿಬ ರದ್ದು ಜನಾಝ ಗ್ವಾಇಬ್ ಆಗಿದ್ದುವು.

(ಹುಝೂರ್ ಹೇಳಿದರು:) ಮೂರನೇ ಪ್ರಸ್ತಾಪದ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್‌ರ ಪುತ್ರಿಯಾದ ಸನ್ಮಾನ್ಯ ತಾಹಿರ ಹನೀಫ್ ಸಾಹಿಬ ಅವರು ಮಿರ್ಝಾ ಹನೀಫ್ ಅಹ್ಮದ್ ಸಾಹಿಬ್‌ರ ಪತ್ನಿಯಾಗಿದ್ದರು. ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ)ರ ಸೊಸೆಯಾಗಿದ್ದರು. ನನ್ನ ತಂದೆಯ ಸಹೋದರಿಯಾಗಿದ್ದರು. ಅವರ ಜನನ 1936ರಲ್ಲಿ ಖಾದಿಯಾನಿನಲ್ಲಿ ಆಗಿತ್ತು. ಬುಖಾರಿಯ ವ್ಯಾಖ್ಯಾನವನ್ನು ಬರೆದಿದ್ದ ಸಯ್ಯದ್ ಝೈನುಲ್ ಆಬಿದೀನ್ ವಲಿಯಲ್ಲಾಹ್ ಶಾಹ್ ಸಾಹಿಬ್‌ರು ಅವರ ತಂದೆಯಾಗಿದ್ದರು. ಡಮಸ್ಕಸಿನವರಾಗಿದ್ದ ಸಯ್ಯದ ಸಯ್ಯಾರ ಸಾಹಿಬ ಅವರ ತಾಯಿಯಾಗಿದ್ದರು. ಅವರ ತಾತ ಮತ್ತು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರ ತಾಯಿಯ ತಂದೆಯೂ ಆದ ಹಝ್ರತ್ ಡಾಕ್ಟರ್ ಸಯ್ಯದ್ ಅಬ್ದುಸ್ಸತ್ತಾರ್ ಶಾಹ್ ಸಾಹಿಬ್(ರ)ರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ಈ ರೀತಿಯಾಗಿ ಅವರು ಖಲೀಫತುಲ್ ಮಸೀಹ್ ರಾಬಿಅ್‌ರ ಸಹೋದರಿಯಾಗಿದ್ದರು. ಅಲ್ಲಾಹನು ಅವರಿಗೆ ಮೂವರು ಪುತ್ರಿಯರನ್ನು ಮತ್ತು ಇಬ್ಬರು ಪುತ್ರರನ್ನು ದಯಪಾಲಿಸಿರುವನು. ಅವರಿಗೆ ಖಿಲಾಫತಿನೊಂದಿಗೆ ಬಹಳ ನಿಷ್ಠೆಯ ಸಂಬಂಧವಿತ್ತು. ನನಗೂ ನಿಯತವಾಗಿ ಪತ್ರಗಳನ್ನು ಬರೆಯುತ್ತಿದ್ದರು. ಬಹುತೇಕ ಪ್ರತಿ ಖುತ್ಬದ ನಂತರ ಅವರ ಪತ್ರ ಬರುತಿತ್ತು. ಅದರಲ್ಲಿ ಅನೇಕ ರೀತಿಯ ವಿವರಣೆಗಳು ಇರುತ್ತಿದ್ದುವು. ಅವರು ಬಡವರಿಗೆ ಬಹಳ ನೆರವಾಗುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಹಿರಿಯರ ಬಳಿ ಸ್ಥಾನವನ್ನು ನೀಡಲಿ ಮತ್ತು ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At, **'Masjid Mubarak',** Islamabad, Tilford, UK, on 18-11-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon